 ಅಸಲುದಾವಃ 97/2023 ಡಿ.ಡಬ್ಲ್ಯೂ: 1

ದಿನಾಂಕಃ  18.08.2026

ಅಸಲುದಾವಃ 97/2023

ಡಿ.ಡಬ್ಲ್ಯೂ: 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ  ವಾದಿ ಪರ ವಕೀಲರಿಂದಃ

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ.  ನಾನು ಸಹಿ ಮಾಡುತ್ತೇನೆ.  ನಾನು ಸಹಿ ಮಾಡಲು ನನ್ನ ಮದುವೆಗೂ ಮುಂಚೆಯಿಂದಲು ಸಹಿ ಹಾಕುತ್ತೇನೆ.   ನನ್ನ ತವರು ಮನೆ ರಾಮನಗರ ಜಿಲ್ಲೆ, ಚೆನ್ನಪಟ್ಟಣ ತಾಲ್ಲೂಕು, ಆರೋಕೊಪ್ಪ ಗ್ರಾಮ. ನಮ್ಮ ಯಜಮಾನರು ತೀರಿಕೊಂಡು 9 ವರ್ಷಗಳಾಗಿವೆ.  ಅಮರ 2017 ರಲ್ಲಿ ತೀರಿಕೊಂಡಿರುತ್ತಾರೆ.  ನನಗೆ 3 ಜನ ಮಕ್ಕಳು.  ಇಬ್ಬರು ಹೆಣ್ಣು ಮಕ್ಕಳು, ಒಬ್ಬ ಮಗ. ನನ್ನ ಯಜಮಾನರು ತೀರಿಕೊಂಡಾಗ ನನ್ನ ಮಕ್ಕಳು ಕಾಲೇಜಿಗೆ ಹೊಗುತ್ತಿದ್ದರು, ಮೈನರ್ ಆಗಿದ್ದರು.  ನಮ್ಮ ಯಜಮಾನರು ತೀರಿಕೊಂಡ ಕಾರಣ ಮತ್ತು ನಿಮ್ಮ ಮಕ್ಕಳು ಮೈನರ್ ಆಗಿದ್ದ ಕಾರಣ ಕುಟುಂಬದ ಯಜಮಾನಿಕೆಯನ್ನು ನಿಮ್ಮ ಮೇಲೆಯೇ ಬಂತು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ.  ಕುಟುಂಬದ ಯಜಮಾನರಾಗಿ ಈವತ್ತಿಗೂ ಸಹ ನೀವೇ ಕಾರ್ಯ ನಿರ್ವಹಿಸುತ್ತಿದ್ದೀರಿ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ.  ನನ್ನ ಹೆಣ್ಣು ಮಕ್ಕಳ ಮದುವೆ ಮಾಡಿರುತ್ತೇನೆ.  ನನ್ನ ಮೊದಲ ಮಗಳ ಮದುವೆಯನ್ನು 5 ನೇ ತಿಂಗಳು 2018 ರಲ್ಲಿ ಮಾಡಿರುತ್ತೇನೆ.  ನನ್ನ ಎರಡನೇ ಮಗಳ ಮದುವೆಯನ್ನು 5 ನೇ ತಂಗಳು 2022 ರಲ್ಲಿ ಮಾಡಿರುತ್ತೇನೆ.  ನನ್ನ ಮಗನ ಮದುವೆ ಮಾಡಿರುವುದಿಲ್ಲ, ಇನ್ನೂ ಚಿಕ್ಕವನ್ನು.

2.  ನಿಮ್ಮ ಮೊದಲ ಮಗಳ ಮದುವೆಗೆ ಎಷ್ಟು ಖರ್ಚು ಮಾಡಿದ್ದೀರಿ ಎಂದರೆ ಸಾಕ್ಷಿ ರೂ.1 ಲಕ್ಷ ಮಾಡಿದ್ದೇನೆ ಎಲ್ಲವನ್ನೂ ನನ್ನ ಅಳಿಯಂದಿರೇ ಖರ್ಚು ಮಾಡಿ ಮಾಡಿಕೊಂಡಿರುತ್ತಾರೆ ಎಂದು ಉತ್ತರಿಸುತ್ತಾರೆ.   ನಿಮ್ಮ ಎರಡನೇ ಮಗಳ ಮದುವೆಗೆ ಎಷ್ಟು ಖರ್ಚು ಮಾಡಿದ್ದೀರಿ ಎಂದರೆ ಸಾಕ್ಷಿ ಅವರ ಮದುವೆಯನ್ನು ನನ್ನ ಅಳಿಯಂದಿರೇ ಖರ್ಚು ಮಾಡಿ ಮಾಡಿಕೊಂಡಿರುತ್ತಾರೆ, ನಾವು ರೂ.1½ ಲಕ್ಷ ಮಾತ್ರ ಖರ್ಚು ಮಾಡಿರುತ್ತೇವೆ ಎಂದು ಉತ್ತರಿಸುತ್ತಾರೆ.   ನನ್ನ ಮಗ ಇಂಜಿನಿಯರಿಂಗ್ ಓದಿರುತ್ತಾನೆ.

ಈಗ ಮುಗಿದಿರುತ್ತದೆ ಇನ್ನೂ ಕೆಲಸಕ್ಕೆ ಹೋಗಿರುವುದಿಲ್ಲ, ನನ್ನ ಮಗ ಮಂಡ್ಯದ ಕಾವೇರಿ ಕಾಲೇಜಿನಲ್ಲಿ ಇಂಜಿನಿಯರಿಂಗ್ ಮಾಡಿರುತ್ತಾನೆ. ಇಂಜಿನಿಯರಿಂಗ್ ಸೇರಿಸಲು ನಿಮ್ಮ ಮಗನಿಗೆ ಎಷ್ಟು ಡೊನೇಷನ್ ಕಟ್ಟಿದ್ದೀರಿ ಎಂದರೆ ಸಾಕ್ಷಿ ಒಂದು ವರ್ಷಕ್ಕೆ ರೂ.1½ ಲಕ್ಷದಂತೆ ಕಟ್ಟಿದ್ದೇನೆ ಎಂದು ಉತ್ತರಿಸುತ್ತಾರೆ.

3. ಈ ಕೇಸನ್ನು ವಾದಿ 20 ಗುಂಟೆ ವಿಸ್ತೀರ್ಣಕ್ಕೆ ಹಾಕಿದ್ದಾರೆ. ಉಳಿದ 19 ಗುಂಟೆ ನಮ್ಮ ಬಳಿಯೇ ಇರುತ್ತದೆ. ಸದರಿ 19 ಗುಂಟೆಗೆ ಶಿವಣ್ಣರವರು ಕೇಸು ಹಾಕಿಲ್ಲವಾ ಎಂದರೆ ಸಾಕ್ಷಿ ಅವರೂ ಕೇಸು ಹಾಕಿರುವುದು ಇದೇ ದಾವ ಸ್ವತ್ತಿಗೆ ಎಂದು ಉತ್ತರಿಸುತ್ತಾರೆ. ಸದರಿ 39 ಗುಂಟೆ ಜಮೀನಿನಲ್ಲಿ ವ್ಯವಸಾಯವನ್ನು ಯಾರು ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ವಾದಿ ಜಯಸ್ವಾಮಿ ಮತ್ತು ಅವರ ಅಣ್ಣ ಶಿವಣ್ಣ ಮಾಡುತ್ತಿದ್ದಾರೆ ಎಂದು ಉತ್ತರಿಸುತ್ತಾರೆ. ಅವರು ಎಷ್ಟು ವರ್ಷಗಳಿಂದ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಸುಮಾರು 20-30 ವರ್ಷಗಳಿಂದ ಅವರೇ ಮಾಡುತ್ತಿದ್ದಾರೆ ಎಂದು ಉತ್ತರಿಸುತ್ತಾರೆ. ಜಯಸ್ವಾಮಿ ಮತ್ತು ಶಿವಣ್ಣನವರು ಸದರಿ ಜಮೀನಿನಲ್ಲಿ ವ್ಯವಸಾಯ ಮಾಡಿ ಅದರ ಉತ್ಪನ್ನವನ್ನು ನಿಮಗೇನಾದರು ಕೊಡುತ್ತಿದ್ದಾರಾ ಎಂದರೆ ಸಾಕ್ಷಿ ಏನೂ ಇಲ್ಲ ಎಂದು ಉತ್ತರಿಸುತ್ತಾರೆ. ಜಯಸ್ವಾಮಿ ಮತ್ತು ಶಿವಣ್ಣನವರು ವ್ಯವಸಾಯ ಮಾಡುತ್ತಿರುವ ಜಮೀನನ್ನು ಬಿಟ್ಟು ನಿಮಗೆ ಬೇರೆ ಯಾವುದಾದರು ಜಮೀನು ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ.

4. ಜಯಸ್ವಾಮಿಯವರಿಗೆ ನೀವು ಜಮೀನು ಅಗ್ರಿಮೆಂಟ್ ಮಾಡಿಕೊಟ್ಟಾಗ ನಿಮ್ಮ ದೊಡ್ಡ ಮಗಳು ಎಲ್ಲಿ ಇದ್ದರು ಎಂದರೆ ಸಾಕ್ಷಿ ಅಲಗೂರಿನಲ್ಲಿ ಇದ್ದರು ಎಂದು ಉತ್ತರಿಸುತ್ತಾರೆ. ನಿಮ್ಮ ಎರಡನೇ ಮಗಳು ಎಲ್ಲಿ ಇದ್ದರು ಎಂದರೆ ಸಾಕ್ಷಿ ನಮ್ಮ ಜೊತೆಯಲ್ಲಿಯೇ ಇದ್ದರು ಎಂದು ಉತ್ತರಿಸುತ್ತಾರೆ. ಮಗ ನಮ್ಮ ಜೊತೆಯಲ್ಲಿಯೇ ಇದ್ದನು, ಓದಲು ಹೋಗುತ್ತಿದ್ದನು.

5. ಶಿವಣ್ಣನವರು ನಿಮ್ಮ ಮೇಲೆ ಹಾಕಿರುವ ಕೇಸಿನ ಜಮೀನಿನ ಚೆಕ್ಕುಬಂದಿ ಪೂರ್ವಕ್ಕೆ ವಿರಾಟಯ್ಯನವರ ಜಮೀನು, ಪಶ್ಚಿಮಕ್ಕೆ ಪ್ರತಿವಾದಿಗಳ ಉಳಿಕೆ ಜಮೀನು, ಉತ್ತರಕ್ಕೆ ಅದೇ ಸರ್ವೆ ನಂ. ನಲ್ಲಿ ಪ್ರತಿವಾದಿಗಳ ಉಳಿಕೆ ಜಮೀನು, ದಕ್ಷಿಣಕ್ಕೆ ಸಿದ್ದಯ್ಯನವರು ಜಮೀನು ಈ ಚೆಕ್ಕುಬಂದಿ ವ್ಯಾಪ್ತಿಯೊಳಗಿನ 19 ಗುಂಟೆ ಜಮೀನನ್ನು

ಶಿವಣ್ಣನವರು ನಿಮ್ಮ ಮೇಲೆ ಕೇಸು ಹಾಕಿರುವುದು ಎಂದರೆ ಸಾಕ್ಷಿ ಹೌದು, ರೂ.1½ ಲಕ್ಷ ಸಾಲ ತೆಗೆದುಕೊಂಡಿದ್ದೆವು, ಅದರ ಭದ್ರತೆಗಾಗಿ ಬರೆದುಕೊಟ್ಟಿದ್ದೇವೆ ಎಂದು ಉತ್ತರಿಸುತ್ತಾರೆ. ಶಿವಣ್ಣರವರಿಗೆ ಮಾಡಿಕೊಟ್ಟಿರುವ 19 ಗುಂಟೆ ಜಮೀನಿನ ಅಗ್ರಿಮೆಂಟ್ ಮಾಡಿಕೊಟ್ಟಿದ್ದು ಉಳಿಕೆ ಅರ್ಧ ಜಮೀನು ವಾದಿ ಜಯಸ್ವಾಮಿರವರಿಗೆ ಅಗ್ರಿಮೆಂಟ್ ಮಾಡಿಕೊಟ್ಟಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ, ಶಿವಣ್ಣನವರಿಂದ ಮಾತ್ರ ರೂ.1 ½ ಲಕ್ಷ ಸಾಲ ಪಡೆದು ಭದ್ರತೆಗಾಗಿ ಅಗ್ರಿಮೆಂಟ್ ಮಾಡಿಕೊಟ್ಟಿದ್ದೆವು, ಜಯಸ್ವಾಮಿಯವರಿಂದ ಯಾವುದೇ ಸಾಲವನ್ನು ಪಡೆದಿಲ್ಲ, ಪತ್ರವನ್ನೂ ಮಾಡಿಕೊಟ್ಟಿಲ್ಲ ಅವರೇ ಎಲ್ಲವನ್ನೂ ಸೃಷ್ಟಿ ಮಾಡಿಕೊಂಡಿರುವುದು ಎಂದು ಉತ್ತರಿಸುತ್ತಾರೆ.

6. ಸಾಕ್ಷಿಗೆ ನಿಪಿ–1 ಅನ್ನು ತೋರಿಸಿ ಈ ಫೋಟೋ ಯಾರದು ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿ ನನ್ನದೇ ಎಂದು ಉತ್ತರಿಸುತ್ತಾರೆ. ನಿಪಿ–1ರ ಪ್ರತಿ ಪುಟದಲ್ಲಿ ಇರುವ ಸಹಿಗಳನ್ನು ತೋರಿಸಿ ಮತ್ತು ಕೊನೆಯ ಪುಟದಲ್ಲಿ ಇರುವ ಸಹಿ ನಿಪಿ–1(ಎ) ನಿಮ್ಮದೇ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿ ಹೌದು ಮಾಡಿಕೊಟ್ಟಿದ್ದೇನೆ ಆದರೆ ಅವಧಿ ಮುಗಿದಿದೆ ಎಂದು ನನಗೆ ಹೇಳಿ ನನ್ನ ಮಕ್ಕಳು ಯಾರೂ ಇರಲಿಲ್ಲ, ನನ್ನ ಒಬ್ಬಳನ್ನು ಕರೆದುಕೊಂಡು ಬಂದು ಮೋಸದಿಂದ ಸಹಿ ಮಾಡಿಸಿಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ನಿಪಿ–6 ರಲ್ಲಿ ಇರುವ ಸಹಿಯನ್ನು ತೋರಿಸಿ ಈ ಸಹಿ ನಿಮ್ಮದೇ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿ ಸದರಿ ಸಹಿಯನ್ನು ನೋಡಿ ಹೌದು ಎಂದು ಉತ್ತರಿಸುತ್ತಾರೆ. ಆದ್ದರಿಂದ ಸದರಿ ಸಹಿಯನ್ನು ನಿಪಿ–6(ಎ) ಎಂದು ಗುರುತಿಸಲಾಯಿತು.

7. ಈ ಕೇಸು ಹಾಕುವ ಮುಂಚೆ ಜಯಸ್ವಾಮಿಯವರು ದಿ.28.03.2023ರಂದು ನಿಮಗೆ ಲಾಯರ್ ಮೂಲಕ ನೋಟಿಸ್ ಕಳುಹಿಸಿದ್ದಾರೆ ಎಂದರೆ ಸಾಕ್ಷಿ ಹೌದು ಆ ನೋಟೀಸ್ ಕೊಟ್ಟ ನಂತರವೇ ಅವರು ಈ ರೀತಿ ಮಾಡಿಕೊಂಡಿದ್ದಾರೆ ಎಂಬ ವಿಚಾರ ತಿಳಿದಿದ್ದು ಎಂದು ಉತ್ತರಿಸುತ್ತಾರೆ. ಆ ನೋಟೀಸಿನ ಜೊತೆಗೆ ಕ್ರಯದ ಬಾಕಿ ಹಣ ರೂ.3 ಲಕ್ಷಗಳ ಚೆಕ್ ಅನ್ನು ಕಳುಹಿಸಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಪುನಃ ಮುಂದುರಿದು ಕೊಟ್ಟಿದ್ದರು ಅದನ್ನು ಪುನಃ ವಾಪಸ್ ಅವರಿಗೆ ಕಳುಹಿಸಿದ್ದೇವೆ ಎಂದು ಹೇಳುತ್ತಾರೆ. ಸದರಿ ನೋಟೀಸಿಗೆ ಉತ್ತರ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕಳುಹಿಸಿದ್ದೇವೆ ಎಂದು ಉತ್ತರಿಸುತ್ತಾರೆ. ನೋಟೀಸಿಗೆ ಉತ್ತರ ಕೊಟ್ಟ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ

ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇವೆ ಎಂದು ಉತ್ತರಿಸುತ್ತಾರೆ. ವಕೀಲರ ಮೂಲಕ ಉತ್ತರ ಕೊಟ್ಟಿದ್ದೀರಾ ಅಥವಾ ನೀವೇ ಉತ್ತರ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಅಪ್ಪಾಜಿಗೌಡ ವಕೀಲರ ಮೂಲಕವೇ ಉತ್ತರೇ ಕೊಟ್ಟಿದ್ದೇವೆ ಎಂದು ಉತ್ತರಿಸುತ್ತಾರೆ. ನೀವು ಹೇಳುವ ರೀತಿ ಚೆಕ್ ಅನ್ನು ವಾಪಸ್ಸು ಕೊಟ್ಟಿಲ್ಲ, ಹಾಗೆಯೇ ನೋಟೀಸಿಗೆ ಉತ್ತರವನ್ನು ಅಪ್ಪಾಜಿಗೌಡ ವಕೀಲರ ಮೂಲಕವೇ ಉತ್ತರನ್ನು ಕೊಟ್ಟಿಲ್ಲ ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ವಾದಿ ಕಳುಹಿಸಿದ ನೋಟೀಸ್ ಬಂದ ನಂತರ ವಿಚಾರ ಗೊತ್ತಾಯಿತು ಎಂದು ಹೇಳಿದ್ದೀರಿ, ನೀವು ಹೇಳುವ ರೀತಿ ವಾದಿ ಮೋಸ ಮಾಡಿದ್ದಲ್ಲಿ ನೀವು ನೋಟೀಸ್ ಬಂದ ನಂತರ ನೀವು ಪ್ರತ್ಯುತ್ತರವನ್ನು ಕೊಡುತ್ತಿದ್ದಿರಿ ಆದರೆ ಯಾವುದೇ ಪ್ರತ್ಯುತ್ತರವನ್ನು ಕೊಟ್ಟಿಲ್ಲ ಎಂದರೆ ಸಾಕ್ಷಿ ಇಲ್ಲ ಕೊಟ್ಟಿದ್ದೇವೆ ಎಂದು ಉತ್ತರಿಸುತ್ತಾರೆ. ಜಯಸ್ವಾಮಿಯವರು ನೋಟೀಸ್ ಕೊಟ್ಟ ನಂತರ ಮೋಸ ಮಾಡಿರುವ ವಿಚಾರ ಗೊತ್ತಾಯಿತು ಎಂದು ಹೇಳಿದ್ದೀರಿ, ಆ ಬಾಬ್ತು ಅವರ ವಿರುದ್ಧ ಏನಾದರು ಕಾನೂನಾತ್ಮಕವಾಗಿ ಕ್ರಮವನ್ನು ಕೈಗೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ.

8. ಜಯಸ್ವಾಮಿಯವರಿಗೆ ಪತ್ರ ಬರೆದುಕೊಟ್ಟ ಸಮಯದಲ್ಲಿ ನಿಮ್ಮ ಜೊತೆ ಯಾರು ಯಾರು ಬಂದಿದ್ದರು ಎಂದರೆ ಸಾಕ್ಷಿ ಯಾರೂ ಬಂದಿರಲಿಲ್ಲ, ನಾನು ಒಬ್ಬಳೇ ಬಂದಿದ್ದೆ ಅವಧಿ ಮುಗಿದಿದೆ ಎಂದು ಜಯಸ್ವಾಮಿ ಮತ್ತು ಶಿವಣ್ಣ ಇಬ್ಬರು ಕರೆದಿದ್ದರು ಎಂದು ಉತ್ತರಿಸುತ್ತಾರೆ. ನೀವು ಈ ವಿಚಾರವನ್ನು ನಿಮ್ಮ ಇಬ್ಬರು ಹೆಣ್ಣು ಮಕ್ಕಳಿಗೆ ಹೇಳಲಿಲ್ಲವಾ ಎಂದರೆ ಸಾಕ್ಷಿ ಅವರಿಗೆ ಗೊತ್ತೇ ಇಲ್ಲ, ನಾನೇಕೆ ಹೇಳಲಿ ಎಂದು ಉತ್ತರಿಸುತ್ತಾರೆ. ನಿಮ್ಮ ಅಳಿಯನಿಗೆ ಏನಾದರು ಹೇಳಿದ್ದೀರಾ ಎಂದರೆ ಸಾಕ್ಷಿ ನಮ್ಮ ಜಮೀನು ಅಳಿಯನಿಗೆ ಯಾಕೆ ಹೇಳಲಿ ಎಂದು ಉತ್ತರಿಸುತ್ತಾರೆ. ನಿಮ್ಮ ಊರಿನಲ್ಲಿಯಾಗಲಿ, ನಿಮ್ಮ ಸಂಬಂಧಿಕರಿಗಾಗಲಿ ಪತ್ರ ಬರೆದುಕೊಡಲು ಹೊಗುತ್ತಿದ್ದೇನೆ ಎಂದು ಹೇಳಿದ್ದೀರಾ ಎಂದರೆ ಸಾಕ್ಷಿ ಯಾಕೆ ಹೇಳಬೇಕು ಮಾರಾಟ ಮಾಡುವುದಿದ್ದರೆ ಎಲ್ಲರಿಗೂ ಹೇಳುತ್ತಿದ್ದೆ ಎಂದು ಉತ್ತರಿಸುತ್ತಾರೆ. ನೀವು ಪತ್ರವನ್ನು ಬರೆದುಕೊಟ್ಟು ಹೋದ ನಂತರವಾದರು ನಿಮ್ಮ ಮಕ್ಕಳಿಗೆ ಹೇಳಿದ್ದೀರಾ ಎಂದರೆ ಸಾಕ್ಷಿ ಹೇಳಿಲ್ಲ, ಅವರಿಗೆ ಏನೂ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

9. ನಿಮ್ಮ ಮನೆಯ ಯಜಮಾನಿಕೆಯನ್ನು ಮಾಡುತ್ತಿದ್ದುದ್ದರಿಂದ ನಿಮ್ಮ ಮಕ್ಕಳ ಪರವಾಗಿ ಎಲ್ಲಾ ವ್ಯವಹಾರಗಳನ್ನು ನೀವೇ ಮಾಡುತ್ತಿದ್ದದ್ದು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನೀವು ಜಯಸ್ವಾಮಿ ಮತ್ತು ಶಿವಣ್ಣರವರಿಗೆ ಒಟ್ಟು ಕುಟುಂಬದ ಯಜಮಾನಿಯಾಗಿ ಪತ್ರಗಳನ್ನು ಬರೆದುಕೊಟ್ಟಿದ್ದೀರಿ ಎಂದರೆ ಸಾಕ್ಷಿ ಇಲ್ಲ, ನಾನು ಬರೆದುಕೊಟ್ಟಿಲ್ಲ, ಅವರೇ ಬರೆಸಿಕೊಂಡಿದ್ದಾರೆ, ಒಟ್ಟು ಕುಟುಂಬದ ಯಜಮಾನಿಯಾಗಿ ಸಹಿ ಮಾಡಿಕೊಟ್ಟಿದ್ದೇನೆ, ಶಿವಣ್ಣರವರ ಪತ್ರಕ್ಕೆ ಮಾತ್ರ ಸಹಿ ಹಾಕಿದ್ದೇನೆ, ಆದರೆ ನೋಟೀಸ್ ಬಂದ ನಂತರವೇ ಈ ರೀತಿ ಮೋಸ ಮಾಡಿರುವ ವಿಚಾರವೆಲ್ಲಾ ನನಗೆ ಗೊತ್ತಾಗಿದ್ದು ಎಂದು ಉತ್ತರಿಸುತ್ತಾರೆ.

10. ನಿಡಿ–3 ಶಿವಣ್ಣರವರಿಗೆ ಬರೆದುಕೊಟ್ಟಿರುವುದಾಗಿ ಹಾಜರು ಪಡಿಸಿರುವ ಪತ್ರ ಎಂದರೆ ಸಾಕ್ಷಿ ಇಲ್ಲ ನಾನು ಹಾಜರು ಮಾಡಿಲ್ಲ, ಯಾವ ಪತ್ರ ಎಂದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಿಡಿ–3 ರ ಪತ್ರದಲ್ಲಿ ಇರುವ ಪೋಟೋ ನಿಮ್ಮದೇ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಅದರಲ್ಲಿ ಶಿವಣ್ಣರವರ ಪೋಟೋ ಸಹ ಇದೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಸದರಿ ಪತ್ರದಲ್ಲಿ ಸರಸ್ವತಮ್ಮ ಎಂದು ಇರುವ ಸಹಿ ನಿಮ್ಮದೇ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಶಿವಣ್ಣರವರಿಗೆ ಮಾಡಿಕೊಟ್ಟಿರುವ ಪತ್ರ ಮೊದಲಾ ಅಥವಾ ಜಯಸ್ವಾಮಿಯವರಿಗೆ ಮಾಡಿಕೊಟ್ಟಿರುವ ಪತ್ರ ಮೊದಲಾ ಎಂದರೆ ಸಾಕ್ಷಿ ಶಿವಣ್ಣರವರಿಗೆ ರೂ.1½ ಲಕ್ಷ ಸಾಲದ ಪತ್ರ ಮೊದಲು ಮಾಡಿಕೊಟ್ಟಿದ್ದೇನೆ ಆ ನಂತರ 3 ಸಾರಿ ಅವರೇ ಪತ್ರ ಮಾಡಿಸಿಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ಜಯಸ್ವಾಮಿಯವರಿಗೆ ದಿ.18.04.2022 ರಲ್ಲಿ ಪತ್ರ ಮಾಡಿಕೊಟ್ಟಿರುವುದು ಎಂದರೆ ಸಾಕ್ಷಿ ಹೌದು, ಶಿವಣ್ಣರವರು ಪತ್ರದ ಅವಧಿ ಮುಗಿದಿದೆ ಬನ್ನಿ ಎಂದು ಹೇಳಿ ಕರೆದುಕೊಂಡು ಬಂದು ಮಾಡಿಸಿದರು ಎಂದು ಉತ್ತರಿಸುತ್ತಾರೆ. ದಿ.02.12.2022 ರಂದು ಶಿವಣ್ಣರವರಿಗೆ ಪತ್ರ ಮಾಡಿಕೊಟ್ಟಿದ್ದೀರಿ ಎಂದರೆ ಸಾಕ್ಷಿ ಹೊಲದ ಹತ್ತಿರ ಬಂದು ಗಲಾಟೆ ಮಾಡಿ ಅವಧಿ ಮುಗಿದು ಹೋಗಿದೆ ಎಂದು ದೌರ್ಜನ್ಯ ಮಾಡಿ ಪತ್ರ ಬರೆಸಿಕೊಂಡರು ಎಂದು ಉತ್ತರಿಸುತ್ತಾರೆ. ಶಿವಣ್ಣರವರಿಗೆ ಕರಾರು ಮಾಡಿಕೊಟ್ಟ ಸಮಯದಲ್ಲಿ ನಿಮ್ಮ ಮಗನನ್ನು ಕರೆದುಕೊಂಡು ಬಂದಿದ್ದಿರಿ ಎಂದರೆ ಸಾಕ್ಷಿ ಹೌದು, ಆದರೆ ನನ್ನ ಮಗನಿಗೂ ಓದಲು ಬಿಡಲಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಮಗ ವಿದ್ಯಾವಂತ, ಅವನಿಗೆ ಕನ್ನಡ ಮತ್ತು ಇಂಗ್ಲಿಷ್ ಓದಲು ಮತ್ತು ಬರೆಯಲು ಬರುತ್ತದೆ ಎಂದರೆ ಸಾಕ್ಷಿ ಹೌದು, ಆದರೆ

ಪತ್ರವನ್ನು ಓದಲು ಕೊಡಲಿಲ್ಲ ಕೇವಲ ಸಹಿ ಮಾತ್ರ ಮಾಡಿಸಿಕೊಂಡರು ಎಂದು ಉತ್ತರಿಸುತ್ತಾರೆ. ಸಬ್ ರಿಜಿಸ್ಟರ್ ಕಛೇರಿಯಲ್ಲಿ ಸಬ್ ರಿಜಿಸ್ಟರ್ ಅವರು ಕರಾರು ಬರೆದುಕೊಡುತ್ತಿದ್ದೀರಿ, ಹಣ ಬಂದಿದೆಯಾ ಎಂದು ನಿಮ್ಮನ್ನು ಕೇಳಿದ್ದಾರೆ ಎಂದರೆ ಸಾಕ್ಷಿ ಇಲ್ಲ, ಯಾರೂ ನನಗೆ ಕೇಳಲಿಲ್ಲ ಎಂದು ಉತ್ತರಿಸುತ್ತಾರೆ. ನಿವೇನಾದರು ಸಬ್ ರಿಜಿಸ್ಟರ್ ಅವರಿಗೆ ನಾನು ಜಮೀನಿನ ಕ್ರಯ ಮಾಡುತ್ತಿಲ್ಲ, ನನಗೆ ಹಣ ಬಂದಿಲ್ಲ ಎಂದು ಹೇಳಿದ್ದೀರಾ ಎಂದರೆ ಸಾಕ್ಷಿ ಇಲ್ಲ, ನಾನು ರೂ.1 ಲಕ್ಷ ಹಣವನ್ನು ಈಸಿಕೊಂಡಿದ್ದರಿಂದ ಹೇಳಲಿಲ್ಲ ಎಂದು ಉತ್ತರಿಸುತ್ತಾರೆ. ನೀವು ಹೇಳುವ ರೂ.1 ಲಕ್ಷಗಳನ್ನು ದಿ.18.04.2022 ರಲ್ಲಿ ಈಸಿಕೊಂಡಿದ್ದೀರಾ ಅಥವಾ ದಿ.02.12.2022 ರಲ್ಲಿ ಈಸಿಕೊಂಡಿದ್ದೀರಾ ಎಂದರೆ ಸಾಕ್ಷಿ 2017 ರಲ್ಲಿ ನನ್ನ ಯಜಮಾನರು ಜೆ.ಎಸ್.ಎಸ್. ಆಸ್ಪತ್ರೆಯಲ್ಲಿ ಇದ್ದಾಗ ಈಸಿಕೊಂಡಿದ್ದು ಅದಕ್ಕೆ ಬಡ್ಡಿಯನ್ನು ಕಟ್ಟಿಕೊಂಡು ಹೋಗುತ್ತಿದ್ದೇನೆ ಎಂದು ಉತ್ತರಿಸುತ್ತಾರೆ. ಬಡ್ಡಿ ಕಟ್ಟಿಕೊಂಡು ಹೊಗುತ್ತಿದ್ದೆ ಎಂದು ಹೇಳುತ್ತೀರಿ ಎಷ್ಟು ಬಡ್ಡಿ ಕೊಡುತ್ತಿದ್ದಿರಿ ಎಂದರೆ ಸಾಕ್ಷಿ ರೂ.2 ರಂತೆ ಬಡ್ಡಿ ಕೊಡುತ್ತಿದ್ದೆ ಎಂದು ಉತ್ತರಿಸುತ್ತಾರೆ. ನಿಮ್ಮ ಲಿಖಿತ ಹೇಳಿಕೆಯಲ್ಲಿಯಾಲಗಿ ನಿಮ್ಮ ಮುಖ್ಯ ಸಾಕ್ಷ್ಯಾ ಪ್ರಮಾಣ ಪತ್ರದಲ್ಲಾಗಲಿ 2017 ರಲ್ಲಿ ಸಾಲ ತೆಗೆದುಕೊಂಡಿದ್ದು, ರೂ.2 ರಂತೆ ಬಡ್ಡಿ ಕೊಡುತ್ತಿದ್ದೆ ಎಂದು ಹೇಳಿ ಬರೆಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಅದು ನಿಜವೇ ಆಗಿದ್ದರೆ ಅದೇ ರೀತಿ ಬರೆಸಲು ತೊಂದರೆ ಏನೂ ಇರಲಿಲ್ಲ ಅಲ್ಲವೇ ಎಂದರೆ ಸಾಕ್ಷಿ ಬರೆಸಲಿಲ್ಲ ಆದರೆ ಅದು ನಿಜ ಬಡ್ಡಿ ಕೊಡುವುದು ನಿಲ್ಲಿಸಿದಾಗ ಈ ಕೇಸು ಹಾಕಿಕೊಂಡು ಬಂದಿದ್ದಾರೆ ಎಂದು ಉತ್ತರಿಸುತ್ತಾರೆ.

**ವಿನಂತಿಯ ಮೇರೆಗೆ ಮುಂದುವರಿದ ಪಾಟೀ ಸವಾಲು ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

(ಶ್ರೀಮತಿ.ಹರಿಣಿ.ಎಂ.ಎಸ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.